ಜನಸಂಖ್ಯೆ ಹೊಂದಿರುವ ಹಾಗೂ 100 ಕುಟುಂಬಗಳಿರುವ ಲಂಬಾಣಿ ತಾಂಡಾ: ಹಟ್ಟಿ: ಹ್ಯಾಮ್ಲೆಟ್‌ಗಳನ್ನು ಕಂದಾಯ ಗ್ರಾಮಗಳನ್ನಾಗಿ ಪರಿವರ್ತಿಸಲಾಗುತ್ತಿದೆ.

ಆ) ರಾಜ್ಯದಲ್ಲಿ ಒಟ್ಟು 918 ಬಂಜಾರ: ಲಂಬಾಣಿ ತಾಂಡಗಳಿರುತ್ತವೆ. ಇವುಗಳಲ್ಲಿ 299 ಅನ್ನು ಕಂದಾಯ ಗ್ರಾಮಗಳನ್ನಾಗಿ ಪರಿವರ್ತಿಸಲಾಗಿದೆ. ಲಂಬಾಣಿ ತಾಂಡಾ: (ಬಣಜಾರ ತಾಂಡ) ಹಟ್ಟಿ: ಹ್ಯಾಮ್ಲೆಟ್, ಮಜರೆ ಗ್ರಾಮ ಇತ್ಯಾದಿಗಳನ್ನು ಕಂದಾಯ ಗ್ರಾಮ ಮಾಡುವ ಬಗ್ಗೆ ಜಿಲ್ಲಾಧಿಕಾರಿಗಳಿಂದ ಪ್ರಸ್ತಾವನೆ ಪಡೆದು ಕರ್ನಾಟಕ ಭೂಕಂದಾಯ ಅಧಿನಿಯಮ–1964ರ (ಕರ್ನಾಟಕ ಕಾಯ್ದೆ 12) ಕಲಂ 5ರನ್ವಯ ಕಂದಾಯ ಗ್ರಾಮಗಳನ್ನಾಗಿ ಪರಿವರ್ತಿಸುವ ಬಗ್ಗೆ ಕ್ರಮ ಕೈಗೊಳ್ಳಲಾಗುತ್ತಿದೆ.

ಇತ್ತೀಚೆಗೆ ರಿಜಿಸ್ಟ್ರಾರ್ ಜನರಲ್ ಮತ್ತು ಸೆನ್ಸಸ್ ಕಮೀಷನರ್, ಇಂಡಿಯಾ, ಭಾರತ ಸರ್ಕಾರ ಇವರ ದಿನಾಂಕ 22.9.2009ರ ಸುತ್ತೋಲೆ ಅನ್ವಯ ಜನಗಣತಿ 2011ರ ಕಾರ್ಯವನ್ನು ಪರಿಣಾಮವಾಗಿ ನಿರ್ವಹಿಸಲು ರಾಜ್ಯ ಆಡಳಿತಾತ್ಮಕ ಘಟಕಗಳಾದ ಪುರಸಭೆ/ ನಗರಸಭೆ/ನಗರಪಾಲಿಕೆಗಳು/ ಕಂದಾಯ ಗ್ರಾಮಗಳು/ ತಹಶೀಲ್ದ್/ ಪೋಲೀಸ್ ಸ್ಟೇಷನ್‌ಗಳು/ ಡೆವಲಪ್‌ಮೆಂಟ್ ಬ್ಲಾಕ್ಸ್/ತಾಲ್ಲೂಕುಗಳು/ಉಪವಿಭಾಗಗಳು/ಜಿಲ್ಲೆಗಳು ಇತ್ತಾದಿಗಳ ಗಡಿಗಳಲ್ಲಿ (Boundaries) ದಿನಾಂಕ 1.1.2010 ರಿಂದ ದಿನಾಂಕ 31.03.2011 ರವರೆಗೆ ಯಾವುದೇ ಬದಲಾವಣೆ ಮಾಡದಂತೆ ನಿರ್ಬಂಧ ಜಾರಿಯಲ್ಲಿದ್ದುದರಿಂದ ಕಂದಾಯ ಗ್ರಾಮಗಳನ್ನು ಮಾಡುವ ಪ್ರಕ್ರಿಯೆಯನ್ನು ತಾತ್ಕಾಲಿಕವಾಗಿ ತಡೆಯಿಡಿಯಲಾಗಿತ್ತು. ಈ ನಿರ್ಬಂಧದ ಅವಧಿಯು ಇತ್ತೀಚೆಗೆ ಮುಗಿದಿರುವುದರಿಂದ ಬಾಕಿ ಉಳಿದಿರುವ ಅರ್ಹ ತಾಂಡಗಳನ್ನು ಕಂದಾಯ ಗ್ರಾಮವನ್ನಾಗಿ ಪರಿವರ್ತಿಸಲು ಕ್ರಮ ಕೈಗೊಳ್ಳಲಾಗುವುದು.

ಈ) ಮೇಲೆ ಹೇಳಲಾದ ಮಾರ್ಗಸೂಚಿಗಳನ್ವಯ ಅರ್ಹವಿರುವ ಬಣಜಾರ ತಾಂಡ್ಯಗಳನ್ನು ಕಂದಾಯ ಗ್ರಾಮ ಮಾಡುವ ಬಗ್ಗೆ ಪರಿಶೀಲಿಸಿ ಜರೂರಾಗಿ ಕ್ರಮ ತೆಗೆದುಕೊಳ್ಳಲಾಗುವುದು.

ಅನುಬಂಧ II

ಇ) ದಿನದ ಪಟ್ಟಿಯಲ್ಲಿ ಸೇರಿಸಲಾದ ಪ್ರಶ್ನೋತ್ತರಗಳು.

ಮಂಗಳೂರು ಇ.ಎಸ್.ಐ. ಆಸ್ಪತ್ರೆ ಮೂಲಭೂತ ಸೌಕರ್ಯ

34 ಶ್ರೀ ಖಾದರ್ ಯು.ಟಿ. (ಮಂಗಳೂರು): ಮಾನ್ಯ ಕಾರ್ಮಿಕ ಮತ್ತು ರೇಷ್ಮೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ದಕ್ಷಿಣ ಕನ್ನಡ ಜಿಲ್ಲೆಯ ಮಂಗಳೂರು ಜಿಲ್ಲಾ ಇ.ಎಸ್.ಐ. ಆಸ್ಪತ್ರೆಯಲ್ಲಿ ಅಗತ್ಯ ಮೂಲ ಭೂತ ಸೌಕರ್ಯಗಳು ಇಲ್ಲದೆ ಕಾರ್ಮಿಕರು ತೊಂದರೆ ಅನುಭವಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ಈ ಆಸ್ಪತ್ರೆಗೆ ಅಗತ್ಯವಿರುವ ಮೂಲಭೂತ ಸೌಕರ್ಯಗಳನ್ನು ಒದಗಿಸಲು ಇರುವ ತೊಂದರೆಗಳೇನು;

ಇ) ಕೇಂದ್ರ ಸರ್ಕಾರ ರಾಜ್ಯಕ್ಕೆ ಇ.ಎಸ್.ಐ. ಆಸ್ಪತ್ರೆಗಳ ಅಭಿವೃದ್ಧಿಗೆ ಅನುದಾನ ಒದಗಿಸುತ್ತಿದೆಯೇ? (ವಿವರ ನೀಡುವುದು)

ಶ್ರೀ ಬಿ.ಎನ್. ಬಚ್ಚೇಗೌಡ (ಕಾರ್ಮಿಕ ಮತ್ತು ರೇಷ್ಮೆ ಸಚಿವರು):

ಅ) ಮೂಲಭೂತ ಸೌಕರ್ಯಗಳ ಕೊರತೆ ಇರುವ ಬಗ್ಗೆ ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ. ಆದರೆ ವೈದ್ಯರ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ.

ಆ) ಕಾರಾವಿ ಆಸ್ಪತ್ರೆ ಮಂಗಳೂರಿನಲ್ಲಿ ವೈದ್ಯರ ಕೊರತೆ ನಿವಾರಿಸಲು ಈ ಕೆಳಕಂಡ ಕ್ರಮವನ್ನು ಕೈಗೊಂಡಿರುತ್ತದೆ.

1. 07 ತಜ್ಞ ವೈದ್ಯಾಧಿಕಾರಿಗಳನ್ನು ಮಾಸಿಕ ಸಂಭಾವನೆ ರೂ.45,000/– ಹಾಗೂ 55,000/– ನೀಡಿ ನೇಮಕಾತಿ ಮಾಡಿಕೊಳ್ಳಲಾಗಿರುತ್ತದೆ.
2. 08 ವಿಭಾಗಗಳಲ್ಲಿ ಅಂಶಕಾಲಿಕ ತಜ್ಞ ವೈದ್ಯಾಧಿಕಾರಿಗಳನ್ನು ನೇಮಕಾತಿ ಮಾಡಿಕೊಳ್ಳಲಾಗಿರುತ್ತದೆ.

ಇ) ಈ ಕೆಳಗಿನಂತೆ ವೆಚ್ಚ ಭರಿಸಿ ಕಾರಾವಿ ನಿಗಮವೇ ಆಸ್ಪತ್ರೆಗಳ ನವೀಕರಣ/ಮೇಲ್ದರ್ಜೆಗೆ ಏರಿಸುವ ಕಾರ್ಯವನ್ನು ಕೈಗೊಂಡಿರುತ್ತದೆ.

1. ಕಾರಾವಿ ಆಸ್ಪತ್ರೆ, ಹುಬ್ಬಳ್ಳಿ. ರೂ.23.50 ಕೋಟಿ.
2. ದಾವಣಗೆರೆ ರೂ.24.20 ಕೋಟಿ.
3. ಮೈಸೂರು ರೂ.24.50 ಕೋಟಿ.
4. ಇಂದಿರಾನಗರ, ರೂ.82.00 ಕೋಟಿ.

ವನ್ಯ ಜೀವಿಗಳಿಂದ ನಾಗರೀಕರಿಗೆ ತೊಂದರೆ ಉಂಟಾಗುತ್ತಿರುವುದು.

7 (26) ಶ್ರೀ ರವಿಸುಬ್ರಹ್ಮಣ್ಯ. ಎಲ್.ಎ (ಬಸವನಗುಡಿ): ಮಾನ್ಯ ಅರಣ್ಯ ಮತ್ತು ಸಣ್ಣ ಕೈಗಾರಿಕೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?